Ref.No. 34/2024

MW-1,

ದಿನಾಂಕಃ 08-06-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ- 1 ನೇ ಪಾರ್ಟಿ ಪರವಾಗಿಃ ಶ್ರೀ. ಎಂ. ಎಸ್. ವಿ. ವಕೀಲರಿಂದಃ

1 ನೇ ಪಕ್ಷಕಾರರು ( ಕಾರ್ಮಿಕರು) ಶೇಕಡಾ 20% ಬೋನಸ್ ಕೇಳಿರುವುದು ನ್ಯಾಯಸಮ್ಮತವೆಂದರೆ ಸರಿಯಲ್ಲ. 11.08.2022 ರಂದು 1 ನೇ ಪಕ್ಷಕಾರರು, 2021-2022 ಆರ್ಥಿಕ ವರ್ಷಕ್ಕೆ ಸಂಬಂಧಪಟ್ಟಂತೆ ಶೇಕಡಾ 20% ಬೋನಸ್ ಕೊಡಬೇಕೆಂದು ಕೋರಿಕೆ ಪತ್ರ ವನ್ನು 2 ನೇ ಪಕ್ಷಕಾರರಿಗೆ ಸಲ್ಲಿಸಿದ್ದರು ಎಂದರೆ ಸರಿ . 2021-2022 ಆರ್ಥಿಕ ವರ್ಷಕ್ಕೆ ಶೇಕಡಾ 8.33% ಬೋನಸ್ ಕೊಡಲಾಗಿದೆ ಎಂದರೆ ಸರಿ . 2021-2022 ಆರ್ಥಿಕ ವರ್ಷದಲ್ಲಿ ಬೋನಸ್ ಪಡೆಯಲು 74 ಅರ್ಹ ಕಾರ್ಮಿಕರಿದ್ದರು ಎಂದರೆ ನನಗೆ ಹೇಳಲು ಆಗುವುದಿಲ್ಲ, ಎಲ್ಲಾ ಕಾರ್ಮಿಕರಿಗೂ ಬೋನಸ್ ಕೊಟ್ಟಿರುತ್ತೇವೆ.

2019-2020, 2020-2021 ಆರ್ಥಿಕ ಸಾಲುಗಳಲ್ಲಿ 2 ನೇ ಪಕ್ಷಕಾರರ ಸಂಸ್ಥೆಗೆ ಲಾಭವಾಗಿರುತ್ತದೆ ಎಂದರೆ ಸರಿಯಲ್ಲ . 2019-2020, 2020-2021 ಆರ್ಥಿಕ ಸಾಲುಗಳ, ಆಸ್ತಿ ಮತ್ತು ಭಾಧ್ಯತೆ ವಿವರಗಳನ್ನು ನಾನು ನೋಡಿ ತಿಳಿದುಕೊಂಡು ಈ ನ್ಯಾಯಾಧೀಕರಣದ ಮುಂದೆ ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿ .

2019-2020, 2020-2021 ಆರ್ಥಿಕ ಸಾಲುಗಳಲ್ಲಿ 2 ನೇ ಪಕ್ಷಕಾರರ ಸಂಸ್ಥೆ ಲಾಭ ಗಳಿಸಿದ್ದರೂ ಸಹ ಲಾಭ ಗಳಿಸಿರುವುದಿಲ್ಲ ಎಂದು ನಾನು ಸುಳ್ಳು ಹೇಳಿರುತ್ತೇನೆ ಎಂದರೆ ಸರಿಯಲ್ಲ . 2019-2020, 2020-2021 ಆರ್ಥಿಕ ಸಾಲಿನಲ್ಲಿ 2 ನೇಪಕ್ಷಕಾರರ ಸಂಸ್ಥೆ ಲಾಭ ಗಳಿಸಿರುವುದರಿಂದ 1 ನೇ ಪಕ್ಷಕಾರರಿಗೆ ಶೇಕಡಾ 20% ಬೊನಸ್ ಕೊಟ್ಟರೆ 2 ನೇ ಪಕ್ಷಕಾರರಿಗೆ ಯಾವುದೇ ರೀತಿಯ ನಷ್ಟ / ತೊಂದರೆ ಆಗುವುದಿಲ್ಲ ಎಂದರೆ ಸರಿಯಲ್ಲ .

2019-2020, 2020-2021 ನೇ ಆರ್ಥಿಕ ಸಾಲಿನಲ್ಲಿ 2 ನೇ ಪಕ್ಷಕಾರರ ಸಂಸ್ಥೆ ಲಾಭ ಗಳಿಸಿರುವುದರಿಂದ, 1 ನೇ ಪಕ್ಷಕಾರರಿಗೆ ಶೇಕಡಾ 20 ಬೋನಸ್ ಕೊಡಬೇಕಾಗುತ್ತದೆ ಎಂದರೆ ಸರಿಯಲ್ಲ .

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ನನ್ನ ಉಕ್ತ ಲೇಖನದಂತೆ ಬಹಿರಂಗ ನ್ಯಾಯಾಲಯದಲ್ಲಿ ಗಣಕೀಕರಿಸಲಾಯಿತು.)

(ಮೇಲಿನ ಸಾಕ್ಷ್ಯವನ್ನು ಸಾಕ್ಷಿಗೆ ಓದಿ , ತಿಳಿಸಿ , ಹೇಳಿದಾಗ ಅವರು ಸರಿ ಇದೆ ಎಂದು ಒಪ್ಪಿದ್ದಾರೆ).

(ನರಶಿಂಸಾ ಎಂ. ವಿ.),
ಅಧ್ಯಕ್ಷಾಧಿಕಾರಿಗಳು/ಜಡ್ಜ್
ಔಧ್ಯಮಿಕ ನ್ಯಾಯಾಧೀಕರಣ,
ಮೈಸೂರು.